**ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**

**ಅಪರಾಧಿಕ ಪ್ರಕರಣ ಸಂಖ್ಯೆ: 308/2019**

ಇವರೊಳಗೆ:

ಕರ್ನಾಟಕ ಸರ್ಕಾರದ ಪರವಾಗಿ ಅಕ್ಕೂರು ಆರಕ್ಷಕ ಉಪನಿರೀಕ್ಷಕರು ........ ಪಿರ್ಯಾದಿ

ಮತ್ತು

ವಿಷಕಂಠ ಮತ್ತು ಇನ್ನೊಬ್ಬರು .......... ಆರೋಪಿತರು

**ದೋಷಾರೋಪಣೆ**

ಶ್ರೀಮತಿ ಶುಭಾ, ಬಿ.ಎ.ಎಲ್, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಪಟ್ಟಣ

1. ವಿಷಕಂಠ ಬಿನ್ ಲೇಟ್ ಪುಟ್ಟಲಿಂಗೇಗೌಡ
ವಯಸ್ಸು 40 ವರ್ಷ

2. ನಾಗೇಂದ್ರಮ್ಮ ಕೋಂ ಲೇಟ್ ಪುಟ್ಟಲಿಂಗೇಗೌಡ
ವಯಸ್ಸು 65 ವರ್ಷ
ಇಬ್ಬರ ವಾಸ: ನುಣ್ಣೂರು ಗ್ರಾಮ, ವಿ. ಪುರ
ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ

**ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಗಳನ್ನು ಹೊರಸುತ್ತೇನೆ.**

ದಿನಾಂಕ: 21.06.2019 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಅಕ್ಕೂರು ಪೋಲಿಸ್ ಠಾಣೆ ಸರಹದ್ದಿನ ನುಣ್ಣೂರು ಗ್ರಾಮದ ಬಳಿ ಹಾರೋಕೊಪ್ಪ-ನುಣ್ಣೂರು ರಸ್ತೆಯ ಪಕ್ಕದಲ್ಲಿ 1ನೇ ಆರೋಪಿಯಾದ ನೀವು ಜಮೀನಿನ ನೇರದಲ್ಲಿ, ಜಮೀನಿನ ವಿಷಯವಾಗಿ ಅಳತೆ ಮಾಡಿಸುವ ಸಲುವಾಗಿ ಹೋಗುತ್ತಿದ್ದಾಗ

1. **ಮೊದಲನೆಯದಾಗಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಹಾಗೂ ಕಾರಣಕ್ಕಾಗಿ** ಆರೋಪಿಗಳ ಪೈಕಿ 1 ಮತ್ತು 2ನೇ ಆರೋಪಿಗಳಾದ ನೀವು ಜಮೀನಿನ ವಿಷಯವಾಗಿ ಅಳತೆ ಮಾಡಿಸುವ ಸಲುವಾಗಿ ಚಾಸಾ1, 2 ರವರನ್ನು ಅಡ್ಡಗಟ್ಟಿರುವ ಕಾರಣ ನೀವು ಭಾ.ದಂ.ಸಂ. ಕಲಂ. 341 ಸಹವಾಚಕ 34 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ. ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

2. **ಮುಂದುವರೆದಂತೆ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ,** ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಹಾಗೂ ಕಾರಣಕ್ಕಾಗಿ, 1 ವತ್ತು 2ನೇ ಆರೋಪಿಗಳಾದ ನೀವು ಸಾಕ್ಷಿ-1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ಮೂಲಕ ನೀವು ಭಾ.ದಂ.ಸಂ.

ಕಲಂ.504 ಸಹ ಕಲಂ 34 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**3. ಮುಂದುವರೆದಂತೆ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ,** ಮೇಲ್ಕಂಡ ದಿನ, ಸ್ಥಳ ಹಾಗೂ ಸಮಯದಲ್ಲಿ ಹಾಗೂ ಕಾರಣಕ್ಕಾಗಿ, 2 ನೇ ಆರೋಪಿಯಾದ ನೀವು ಸಾಕ್ಷಿ-1 ರವರ ತಲೆಯ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿ ಕೈಗಳಿಂದ ಹೊಡೆದು ಕಾಲಿನಿಂದ ಒದ್ದು ಮತ್ತು 1 ನೇ ಆರೋಪಿಯಾದ ನೀವು ಸಾಕ್ಷಿ-2 ರವರಿಗೆ ಕೈಗಳಿಂದ ಮೈಮೇಲೆ ಮತ್ತು ತಲೆಯ ಮೇಲೆ ಹೊಡೆದು ಕೆಳಕ್ಕೆ ಕೆಡವಿಕೊಂಡು ಕಾಲಿನಿಂದ ಒದ್ದಿರುತ್ತೀರಿ ಸಾಕ್ಷಿ-1, 2 ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದಕಾರಣ ಈ ಮೂಲಕ ನೀವು ಭಾ.ದಂ.ಸಂ. ಕಲಂ. 323 ಸಹ ಕಲಂ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಆದ್ದರಿಂದ ನೀವು ಮೇಲೆ ಹೇಳಿದ ದೋಷಾರೋಪಣೆಗಳಿಗೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

**Sd/-**
( ಶುಭಾ )
ಹಿ.ಸಿ.ನ್ಯಾ ಮತ್ತು ಪ್ರಧ.ನ್ಯಾ.ದಂ., ಚನ್ನಪಟ್ಟಣ

ದಿನಾಂಕಃ-

**ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**
**ಅಪರಾಧಿಕ ಪ್ರಕರಣ ಸಂಖ್ಯೆಃ 308/ 2019**

ಪಿರ್ಯಾದಿ ಃ ಆರೋಪಿತ
ಅಕ್ಕೂರು ಪೋಲಿಸ್ ಠಾಣೆ ಃ ಎ 1. ವಿಷಕಂಠ

| | | |
|---|---|---|
| ಹೆಸರು | ಃ | ಎ 1. ವಿಷಕಂಠ |
| ತಂದೆ/ಗಂಡನ ಹೆಸರು | ಃ | ಬಿನ್ ಲೇಟ್ ಪುಟ್ಟಲಿಂಗೇಗೌಡ |
| ವಯಸ್ಸು | ಃ | 40 ವರ್ಷ |
| ವಾಸ | ಃ | ನುಣ್ಣೂರು ಗ್ರಾಮ, ವಿ. ಪುರ ಹೋಬಳಿ,<br>ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ. |

**ದೋಷಾರೋಪಣೆ**

ಪ್ರಶ್ನೆ 1. ನಿಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ ಹೌದು

ಪ್ರಶ್ನೆ 2. ನಿಮ್ಮ ವಿರುದ್ದ ಮಾಡಲಾದ ಅರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?

ಉತ್ತರಃ ಸುಳ್ಳು ವಿಚಾರಣೆಯಾಗಬೇಕು
(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನುಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕಃ-

(ಶುಭಾ)
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

**ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**
**ಅಪರಾಧಿಕ ಪ್ರಕರಣ ಸಂಖ್ಯೆಃ 308/ 2019**

ಪಿರ್ಯಾದಿ ಃ ಆರೋಪಿತ
ಅಕ್ಕೂರು ಪೋಲಿಸ್ ಠಾಣೆ ಃ ಎ 2. ವಿಷಕಂಠ

| | | |
|---|---|---|
| ಹೆಸರು | ಃ | ಎ 2. ನಾಗೇಂದ್ರಮ್ಮ |
| ತಂದೆ/ಗಂಡನ ಹೆಸರು | ಃ | ಕೋಂ ಲೇಟ್ ಪುಟ್ಟಲಿಂಗೇಗೌಡ |
| ವಯಸ್ಸು | ಃ | 65 ವರ್ಷ |
| ವಾಸ | ಃ | ನುಣ್ಣೂರು ಗ್ರಾಮ, ವಿ. ಪುರ ಹೋಬಳಿ,<br>ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ. |

**ದೋಷಾರೋಪಣೆ**

ಪ್ರಶ್ನೆ 1. ನಿಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ ಹೌದು

ಪ್ರಶ್ನೆ 2. ನಿಮ್ಮ ವಿರುದ್ದ ಮಾಡಲಾದ ಅರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?

ಉತ್ತರಃ ಸುಳ್ಳು ವಿಚಾರಣೆಯಾಗಬೇಕು

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನುಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕಃ-

(ಶುಭಾ)
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ